ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಶಾಖೆ / ವಿಷಯ : DEPARTMENT / SUBJECT: [illegible]

ತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 24/9/19

## 26ಕ್ಕೆ ಅನರ್ಹರ ಭವಿಷ್ಯ ನಿರ್ಧರಿಸಲಿರುವ ಸುಪ್ರೀಂಕೋರ್ಟ್

**ಸ್ಪರ್ಧೆಗೆ ಅವಕಾಶ ಕೋರಿದ ಮಧ್ಯಂತರ ಅರ್ಜಿ ವಿಚಾರಣೆಗೆ ಸುಪ್ರೀಂ ಸಮ್ಮತಿ**

**ಅನರ್ಹ ಶಾಸಕರ ಚುನಾವಣೆ ಸ್ಪರ್ಧೆಗೆ ಅಡ್ಡಿ ಇಲ್ಲ ಎಂದು ಹೇಳಿದ ಆಯೋಗ**

# ಮುಗಿದಿಲ್ಲ ಅನರ್ಹರ ಟೆನ್ಶನ್

**ವಿಕ ಸುದ್ದಿಲೋಕ** ಹೊಸದಿಲ್ಲಿ


ರಾಜ್ಯದಲ್ಲಿ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬರಲು ಕಾರಣಕರ್ತರಾದ ಅನರ್ಹ ಶಾಸಕರಿಗೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಸುಪ್ರೀಂ ಕೋರ್ಟ್ ಅವಕಾಶ ನೀಡುತ್ತದೆಯೋ ಇಲ್ಲವೋ ಎಂಬುದು ಗೊತ್ತಾಗಲು ಗುರುವಾರದವರೆಗೆ ಕಾಯಬೇಕಿದೆ. ಅನರ್ಹರು ಸ್ಪರ್ಧಿಸಲು ತಮ್ಮ ಆಕ್ಷೇಪ ಇಲ್ಲ ಎಂದು ಚುನಾವಣೆ ಆಯೋಗ ಕೋರ್ಟ್‌ಗೆ ಹೇಳಿದೆ. ಆದರೆ ಈ ಬಗ್ಗೆ ಸುಪ್ರೀಂ ಕೋರ್ಟ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

''ಕರ್ನಾಟಕದ 15 ವಿಧಾನಸಭೆ ಕ್ಷೇತ್ರಗಳಿಗೆ ಘೋಷಣೆಯಾಗಿರುವ ಉಪಚುನಾವಣೆಯನ್ನು ಮುಂದೂಡಬೇಕು, ಇಲ್ಲವೇ ಸ್ಪರ್ಧಿಸಲು ತಮಗೂ ಅವಕಾಶ ನೀಡಬೇಕು,'' ಎಂದು ಅನರ್ಹ ಶಾಸಕರು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಸುಪ್ರೀಂಕೋರ್ಟ್ ಸೋಮವಾರ ವಿಚಾರಣೆಗೆ ಕೈಗೆತ್ತಿಕೊಂಡಿತು. ಆದರೆ ಅನರ್ಹ ಶಾಸಕರ ಪರ ವಕೀಲ ಮುಕುಲ್ ರೋಹಟಗಿ ಬಯಸಿದಂತೆ ಪರಿಹಾರ ರೂಪದಲ್ಲಿ ತಕ್ಷಣವೇ ಮಧ್ಯಂತರ ಆದೇಶ ನೀಡಲು ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ತ್ರಿ ಸದಸ್ಯ ಪೀಠ ಒಪ್ಪದೇ, ವಿಚಾರಣೆಯನ್ನು 25ಕ್ಕೆ ಮುಂದೂಡಿತು. »02

ಅನರ್ಹರಿಗೆ ಭವಿಷ್ಯದ ಆತಂಕ »02

### ಚುನಾವಣೆ ಮುಂದೂಡಿಕೆಗೆ ಚು.ಆಯೋಗ ಆಕ್ಷೇಪ

**ಚುನಾವಣಾ ಆಯೋಗದ ಪರವಾಗಿ ಕೋರ್ಟ್‌ಗೆ ಹಾಜರಾದ ವಕೀಲ ರಾಕೇಶ್ ದ್ವಿವೇದಿ ''ಅಧಿಸೂಚನೆ ಪ್ರಕಟಿಸಿರುವ 15 ಕ್ಷೇತ್ರಗಳ ಉಪ ಚುನಾವಣೆಗೆ ನ್ಯಾಯಾಲಯ ಯಾವುದೇ ಕಾರಣಕ್ಕೂ ತಡೆ ನೀಡಬಾರದು. ಆದರೆ, ಅನರ್ಹ ಶಾಸಕರು ಉಪ ಚುನಾವಣೆಗೆ ಸ್ಪರ್ಧಿಸದಂತೆ ತಡೆಯಲು ಬರುವುದಿಲ್ಲ. ಅದಕ್ಕೆ ಆಯೋಗದ ಆಕ್ಷೇಪವಿಲ್ಲ,'' ಎಂದು ಹೇಳುವ ಮೂಲಕ, ಅನರ್ಹ ಶಾಸಕರ ಮುಖದಲ್ಲಿ ಒಂದಿಷ್ಟು ಸಮಾಧಾನ ಮೂಡುವಂತೆ ಮಾಡಿದರು.**



### ವಿಚಾರಣೆ ಮುಂದೂಡಲು ಕಾಂಗ್ರೆಸ್ ಮನವಿ

**ಕಾಂಗ್ರೆಸ್ ಶಾಸಕಾಂಗ ಪಕ್ಷದ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ''ಪಕ್ಷಾಂತರ ನಿಷೇಧ ಕಾಯಿದೆ ಅನ್ವಯ ನಿಮ್ಮನ್ನು ಅನರ್ಹ ಮಾಡಬಾರದೇಕೆ ಎಂದು ನೋಟಿಸ್ ಜಾರಿ ಮಾಡಿಯೇ ಇಬ್ಬರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಉಳಿದವರಿಗೆ ರಾಜೀನಾಮೆ ಸಲ್ಲಿಸಿದ ನಂತರ ನೋಟಿಸ್ ನೀಡಲಾಗಿದೆ. ಅನರ್ಹ ಮಾಡಿರುವ ಪ್ರಕ್ರಿಯೆ ಸರಿಯಾಗಿದೆ. ಹಾಗಾಗಿ ವಿಚಾರಣೆ ಮುಂದೂಡಿ,'' ಎಂದು ಮನವಿ ಮಾಡಿದರು.**

### ಅಧಿಸೂಚನೆ ನಡುವೆ ಆತಂಕ

**ಹೊಸದಿಲ್ಲಿ:** ಅನರ್ಹ ಶಾಸಕರು ಉಪ ಚುನಾವಣೆಗೆ ಸ್ಪರ್ಧಿಸಲು ತಕರಾರು ಇಲ್ಲ ಎಂದು ಚುನಾವಣಾ ಆಯೋಗ ಸುಪ್ರೀಂಕೋರ್ಟ್ ಮುಂದೆ ಹೇಳಿರುವುದು ಅನರ್ಹರ ಪಾಲಿಗೆ ಕೊಂಚ ನಿರಾಳ. ಆದರೆ ಈ ವಿಷಯ ಕುರಿತು ಸುಪ್ರೀಂಕೋರ್ಟ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಉಪ ಚುನಾವಣೆಗೆ ನಾಮಪತ್ರ ಸಲ್ಲಿಕೆ ಶುರುವಾದ ದಿನವೇ ವಿಚಾರಣೆ ಕೈಗೆತ್ತಿಕೊಂಡಿರುವ ಕೋರ್ಟ್, ಸೆ.25ರಿಂದ ವಾದ ವಿವಾದ ಆಲಿಸುವುದಾಗಿ ಹೇಳಿದೆ. ಇದು ಅನರ್ಹರನ್ನು ಆತಂಕದಲ್ಲಿಯೇ ಕಾಲ ಕಳೆಯುವಂತೆ ಮಾಡಿದೆ. ನಾಮಪತ್ರ ಸಲ್ಲಿಕೆಗೆ ಸೆ.30 ಕಡೆ ದಿನ. ಅಷ್ಟರೊಳಗೆ ವಾದ-ವಿವಾದ ಆಲಿಸಿ ಕೋರ್ಟ್ ನೀಡಲಿರುವ ಮಧ್ಯಂತರ ಪರಿಹಾರ ಆದೇಶವು ಅನರ್ಹ ಶಾಸಕರ ಚುನಾವಣಾ ಸ್ಪರ್ಧೆಯ ಭವಿಷ್ಯವನ್ನು ನಿರ್ಧರಿಸಲಿದೆ.

ಸುಪ್ರೀಂಕೋರ್ಟ್ ಚುನಾವಣೆಗೆ ತಡೆನೀಡಿ ಮಧ್ಯಂತರ ಆದೇಶ ನೀಡಲಾರದು. ಉಪಚುನಾವಣೆಗೆ ಸ್ಪರ್ಧೆ ಮಾಡಲು ನಿರ್ಬಂಧ ಇಲ್ಲ ಎಂದು ಆಯೋಗವೇ ಸ್ಪಷ್ಟಪಡಿಸಿದ್ದರಿಂದ ಅನರ್ಹರಿಗೆ ಈ ವಿಚಾರದಲ್ಲಿ ಮಾತ್ರ ರಿಲೀಫ್ ಸಿಗಲಿದೆ.

\- **ಕೆ.ವಿ.ಧನಂಜಯ** ಸುಪ್ರೀಂ ಕೋರ್ಟ್ ನ್ಯಾಯವಾದಿ

ಮೂರು ಬಗೆಯ ಆದೇಶ ನಿರೀಕ್ಷಿಸಬಹುದು. ಶಾಸಕರ ಅನರ್ಹತೆ ಆದೇಶ ಅಸಿಂಧು ಎನ್ನಬಹುದು, ಅನರ್ಹತೆ ಆದೇಶವನ್ನು ಎತ್ತಿ ಹಿಡಿಯುವುದು ಹಾಗೂ ಅನರ್ಹತೆ ಆದೇಶ ಸಿಂಧುಗೊಳಿಸಿಯೂ ಉಪಚುನಾವಣೆಗೆ ಸ್ಪರ್ಧೆ ಮಾಡುವಂತಿಲ್ಲ ಎನ್ನಬಹುದು. - **ಪ್ರೊ. ಸಂದೀಪ್ ಶಾಸ್ತ್ರಿ** ರಾಜಕೀಯ ವಿಶ್ಲೇಷಕ

# ಮುಗಿದಿಲ್ಲ ಅನರ್ಹ ಶಾಸಕರ ಟೆನ್ಶನ್

» ಮೊದಲ ಪುಟದಿಂದ

''ಪ್ರಕರಣ ಕುರಿತು ಸುದೀರ್ಘ ವಿಚಾರಣೆ ಅವಶ್ಯವಿದೆ. ಅನರ್ಹ ಶಾಸಕರ ಪರ ವಕೀಲ ಮುಕುಲ್ ರೋಹಟಗಿ ಅವರು ಸೆ. 25ರಂದು ಹಾಗೂ ಕಾಂಗ್ರೆಸ್ ಪರ ವಕೀಲ ಕಪಿಲ್ ಸಿಬಲ್ ಅವರು ಸೆ. 26ರಂದು ವಾದ ಮಂಡಿಸಲಿ,'' ಎಂದು ನ್ಯಾಯಪೀಠ ಸೂಚಿಸಿತು.

**ಉಪ ಚುನಾವಣೆ ಮುಂದೂಡಿ: ರೋಹಟಗಿ**

ಅನರ್ಹ ಶಾಸಕರ ಪರ ಅರ್ಜಿ ಸಲ್ಲಿಸಿದ ವಕೀಲ ಮುಕುಲ್ ರೋಹಟಗಿ ''15 ಕ್ಷೇತ್ರಗಳಿಗೆ ಅ.21ರಂದು ನಡೆಯಲಿರುವ ಚುನಾವಣೆಯನ್ನು ಮುಂದೂಡಿ ಇಲ್ಲವೇ ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹರಿಗೂ ಅವಕಾಶ ಕಲ್ಪಿಸಿ. 2015ರಲ್ಲಿ ಇಂಥದ್ದೆ ಪ್ರಕರಣದಲ್ಲಿ ಹೈದ್ರಾಬಾದ್ ನ್ಯಾಯಾಲಯ ಚುನಾವಣೆ ಮುಂದೂಡಿತ್ತು,'' ಎಂದು ಗಮನ ಸೆಳೆದರು.

''ಆಗಿನ ಸ್ಪೀಕರ್ ರಮೇಶ್‌ಕುಮಾರ್ ತಮ್ಮ ಕಾರ್ಯವ್ಯಾಪ್ತಿ ಮೀರಿ, ಶಾಸಕರನ್ನು ಕಾನೂನು ಬಾಹಿರವಾಗಿ ಅನರ್ಹತೆಗೊಳಿಸಿದ್ದಾರೆ. ಸ್ಪೀಕರ್ ಆದೇಶದಲ್ಲಿ ಲೋಪದೋಷಗಳಿವೆ. ಅನರ್ಹರು 2023ರ ವರೆಗೂ ವಿಧಾನಸಭೆಗೆ ಸ್ಪರ್ಧಿಸಲು ಬರುವುದಿಲ್ಲ ಎಂದು ಅವಧಿ ನಿಗದಿಗೊಳಿಸುವ ಯಾವ ಹಕ್ಕು ಸ್ಪೀಕರ್‌ಗೆ ಇರಲಿಲ್ಲ,'' ಎಂದು ವಾದಿಸಿದರು.

**ಆಯೋಗದ ನಡೆಗೆ ಕಾಂಗ್ರೆಸ್ ಆಕ್ಷೇಪ:** ಇದೇ ವೇಳೆ ಚುನಾವಣಾ ಆಯೋಗ ಕೋರ್ಟ್‌ನಲ್ಲಿ ಸಲ್ಲಿಸಿದ ಪ್ರಸ್ತಾವನೆಗೆ ಆಕ್ಷೇಪಿಸಿದ ಕಪಿಲ್ ಸಿಬಲ್ ''ಈ ವಿಚಾರಣೆಯಲ್ಲಿ ನೀವು ಭಾಗಿದಾರರೇ ಅಲ್ಲ. ನೀವು ಬರುವ ಅವಶ್ಯಕತೆಯೇ ಏನಿತ್ತು,'' ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಕುಲ್ ರೋಹಟಗಿ, ''ಚುನಾವಣಾ ಆಯೋಗವನ್ನು ಈ ಪ್ರಕರಣದಲ್ಲಿ ಭಾಗಿದಾರರನ್ನಾಗಿ ಮಾಡುವಂತೆ ಕೋರಿ ನ್ಯಾಯಪೀಠಕ್ಕೆ ಅರ್ಜಿ ಸಲ್ಲಿಸುತ್ತೇವೆ,'' ಎಂದು ಹೇಳಿದರು.

**ಎಲ್ಲರಿಗೂ ನೋಟಿಸ್:** ಈ ಪ್ರಕರಣದಲ್ಲಿ ಶಾಸಕರನ್ನು ನಿಯಮ ಬಾಹಿರವಾಗಿ ಅನರ್ಹತೆ ಮಾಡಲಾಗಿದೆ ಎಂದು ಮುಕುಲ್ ರೋಹಟಗಿ ವಾದ ಮಂಡಿಸಿದ ಹಿನ್ನೆಲೆ ಪ್ರಕರಣದಲ್ಲಿ ಪ್ರತಿವಾದಿಗಳಾದ ಮಾಜಿ ಸಿಎಂ ಸಿದ್ದರಾಮಯ್ಯ, ದಿನೇಶ್ ಗುಂಡೂರಾವ್, ಎಚ್.ಡಿ ಕುಮಾರಸ್ವಾಮಿ, ಸ್ಪೀಕರ್ ಸೇರಿದಂತೆ ಇತರರು ಬುಧವಾರದೊಳಗೆ ಪ್ರತಿಕ್ರಿಯೆ ನೀಡಲು ಸುಪ್ರೀಂ ಕೋರ್ಟ್ ನೋಟೀಸ್ ನೀಡಿದೆ.

## ಯೋಗೇಶ್ವರ್ ಭರವಸೆ

**ದಿಲ್ಲಿಯ ಖಾಸಗಿ ಹೋಟೇಲ್‌ನಲ್ಲಿ ವಾಸ್ತವ್ಯ ಹೂಡಿರುವ ಕೆಲವು ಅನರ್ಹ ಶಾಸಕರನ್ನು ಬಿಜೆಪಿಯ ಸಿ.ಪಿ. ಯೋಗೇಶ್ವರ ಅವರು ಸೋಮವಾರ ಭೇಟಿ ಮಾಡಿ, ಚರ್ಚಿಸಿದರು. ಬಿಜೆಪಿಯಿಂದ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದರಲ್ಲದೇ, ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು. ಬಳಿಕ ಕೇಂದ್ರ ಬಿಜೆಪಿ ಮುಖಂಡರನ್ನೂ ಭೇಟಿ ಮಾಡಿ ಈ ಬಗ್ಗೆ ಮಾತುಕತೆ ನಡೆಸಿದರು. ಅನರ್ಹಗೊಂಡಿರುವ ಮುನಿರತ್ನ, ಎಸ್.ಟಿ. ಸೋಮಶೇಖರ್, ಬಿ.ಸಿ.ಪಾಟೀಲ್, ಪ್ರತಾಪ್ ಗೌಡ ಪಾಟೀಲ್, ರಮೇಶ್ ಜಾರಕಿಹೊಳಿ, ಶಿವರಾಮ್ ಹೆಬ್ಬಾರ್ ಅವರು ಭಾನುವಾರ ತಡ ರಾತ್ರಿಯೇ ದಿಲ್ಲಿಗೆ ಆಗಮಿಸಿದ್ದರು.**

## ಅಧಿಸೂಚನೆ ಪ್ರಕಟ

**ಬೆಂಗಳೂರು: ಅನರ್ಹರ ರಾಜಕೀಯ ಭವಿಷ್ಯ ಸುಪ್ರೀಂಕೋರ್ಟ್‌ನಲ್ಲಿ ತೂಗೂಯ್ಯಾಲೆಯಲ್ಲಿರುವಾಗಲೇ 15 ಕ್ಷೇತ್ರಗಳ ಉಪ ಚುನಾವಣೆಗೆ ಸೋಮವಾರ ಅಧಿಕೃತವಾಗಿ ಅಧಿಸೂಚನೆ ಹೊರಬಿದ್ದಿದೆ. ಅಥಣಿ, ಕಾಗವಾಡ, ಗೋಕಾಕ್, ಯಲ್ಲಾಪುರ, ಹಿರೇಕೆರೂರು, ರಾಣೆಬೆನ್ನೂರು, ವಿಜಯನಗರ, ಚಿಕ್ಕಬಳ್ಳಾಪುರ, ಕೆ.ಆರ್.ಪುರ, ಯಶವಂತಪುರ, ಮಹಾಲಕ್ಷ್ಮಿ ಲೇಔಟ್, ಶಿವಾಜಿನಗರ, ಹೊಸಕೋಟೆ, ಕೆ.ಆರ್.ಪೇಟೆ ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರಗಳಿಗೆ ಅಕ್ಟೋಬರ್ 21 ರಂದು ನಿಗದಿಯಾಗಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಸೋಮವಾರದಿಂದ ಅಧಿಕೃತವಾಗಿ ಚಾಲನೆ ಪಡೆದುಕೊಂಡಿದೆ. ನಾಮಪತ್ರ ಸಲ್ಲಿಕೆಗೆ ಸೆ.30 ಕಡೆಯ ದಿನವಾಗಿದೆ. ಚಿಕ್ಕಬಳ್ಳಾಪುರ ಮತ್ತಿತರ ಕ್ಷೇತ್ರಗಳಲ್ಲಿ ಪಕ್ಷೇತರ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದನ್ನು ಹೊರತುಪಡಿಸಿದರೆ ಪ್ರಮುಖ ರಾಜಕೀಯ ಪಕ್ಷಗಳ ಅಧಿಕೃತ ಅಭ್ಯರ್ಥಿಗಳು ಇದುವರೆಗೂ ನಾಮಪತ್ರ ಸಲ್ಲಿಸಿಲ್ಲ.**